**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 105/2019**

**ದಿನಾಂಕಃ 10.10.2022**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 1**

| | | |
|---|---|---|
| ಹೆಸರು | ಃ | ಗಂಗಾಧರ |
| ತಂದೆಯ ಹೆಸರು | ಃ | ಮುದ್ದಪ್ಪ |
| ವಯಸ್ಸು | ಃ | 61 ವರ್ಷ |
| ಉದ್ಯೋಗ | ಃ | ನಿವೃತ್ತ ರಾಜಸ್ವ ನಿರೀಕ್ಷಕರು, ಕಂದಾಯ ಇಲಾಖೆ |
| ವಾಸ ಸ್ಥಳ | ಃ | ರಾಮನಗರ |

**ದೋಷರೋಪಣಾ ರಚನೆಯ ಪೂರ್ವ ಸಾಕ್ಷ್ಯ**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ತಾಃ 01.01.2019 ರಿಂದ ತಾಃ 30.09.2021 ರವರೆಗೆ ಬಿಡದಿ ತಾಲ್ಲೂಕು ತಹಶೀಲ್ದಾರ್ ಕಚೇರಿಯಲ್ಲಿ ಕಂದಾಯ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

2. ತಾಃ 15.02.2019 ರಂದು ಬೆಳಿಗ್ಗೆ 4.30 ಗಂಟೆಗೆ ತಹಶೀಲ್ದಾರರ ಮೌಖಿಕ ಆದೇಶದ ಮೇರೆಗೆ ಬೆಳಿಗ್ಗೆ 5.30 ರಿಂದ 7 ಗಂಟೆ ಸಮಯದಲ್ಲಿ ನಾನು, ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾಮಲೆಕ್ಕಾಧಿಕಾರಿ, ಬಿಡದಿ ಹೋಬಳಿ ಅರಳಾಳುಸಂದ್ರ ಗ್ರಾಮದ ಸರ್ವೆ ನಂ.37 ರಲ್ಲಿ 5 ಎಕೆರೆ 9 ಗುಂಟೆ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಿದಾಗ ಜಮೀನಿನಲ್ಲಿ ಕೆಲವರು ನಿಷ್ಪೇದಿತ ಮರಳು ತಯಾರಿಸುತ್ತಿದ್ದರು. ಅಲ್ಲಿ ಒಂದು ಟಿಪ್ಪರ್ ಮತ್ತು ಒಂದು ಜೆಸಿಬಿ ಇತ್ತು. ಟಿಪ್ಪರಿನಲ್ಲಿ ಮರಳು ತುಂಬಿದ್ದರು. ನಮ್ಮನ್ನು ನೋಡಿ ಸದರಿ ವಾಹನದ ಚಾಲಕರು ಓಡಿ ಹೋದರು.

3. ನಾನು ಸದರಿ ವಾಹನಗಳನ್ನು ವಶಪಡಿಸಿಕೊಂಡು, ಪೊಲೀಸರ ವಶಕ್ಕೆ ನೀಡಿದೆನು. ಆ ಬಗ್ಗೆ ಸ್ಥಳದಲ್ಲಿ ಮಹಜರ ಮಾಡಿರುತ್ತೇವೆ. ಸದರಿ ಮಹಜರನ್ನು

ಈಗ ನೋಡುತ್ತಿದ್ದು ಅದನ್ನು ಈಗ ನಿಪಿ.1 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

4. ವಾಹನ ಮಾಲೀಕರ ಬಗ್ಗೆ ಆರ್‌ಟಿಓರವರಿಂದ ಮಾಹಿತಿ ಪಡೆದುಕೊಂಡು, ಸದರಿ ಜೆಬಿಸಿ ಮತ್ತು ಟಿಪ್ಪರ್ ಮಾಲೀಕರಿಗೆ ನೋಟೀಸ್ ನೀಡಿರುತ್ತೇನೆ. ಸ್ಥಳದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿ ಗುರುತಿಸಿದ ಸ್ಥಳದ ಫೋಟೋಗಳನ್ನು ಈಗ ಕ್ರಮವಾಗಿ ನಿಪಿ.2 ಮತ್ತು ನಿಪಿ.3 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನಿಪಿ.4 ಎಂದು ಗುರುತಿಸಲಾಯಿತು.

5. ಸದರಿ ಮಾಲೀಕರಿಗೆ ಕೊಟ್ಟಂತಹ ನೋಟೀಸನ್ನು ಈಗ ನಿಪಿ.5 ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.5(ಎ) ಎಂದು ಗುರುತಿಸಲಾಯಿತು. ಸದರಿ ಜೆಸಿಬಿ, ಫಿಲ್ಟರ್ ಸ್ಯಾಂಡ್ ಮತ್ತು ಟಪ್ಪರ್‌ನ್ನು ಬಿಡದಿ ಪೊಲೀಸರ ವಶಕ್ಕೆ ನೀಡಿದೆವು.

6. ಆನಂತರ ಆ ಬಗ್ಗೆ ನ್ಯಾಯಾಲಯದಲ್ಲಿ ದೂರು ಸಲ್ಲಿಸಿರುತ್ತೇನೆ. ದೂರನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದೂರನ್ನು ಈಗ ನಿಪಿ.6 ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.6(ಎ) ಎಂದು ಗುರುತಿಸಲಾಯಿತು.

7. ಸಾಕ್ಷಿ ಗುರುತಿಸಿದ ಆರ್‌ಟಿಸಿ ಸರ್ವೆ ನಂ.37/2, ಜೆಸಿಬಿ ಬಿ ಎಕ್ಸಟ್ರಾಕ್ಟ, ಟಿಪ್ಪರ್ ಲಾರಿಯ ಬಿ ಎಕ್ಸಟ್ರಾಕ್ಟ, ಆರೋಪಿ ಕೊಟ್ಟ ವಾಹನಗಳ ದಾಖಲೆಗಳು ಆರ್‌ಸಿ ಕಾಪಿ, ಎಫ್‌ಸಿ ಕಾಪಿ, ಇನ್ಶೂರೆನ್ಸ ಕಾಫಿ ಇವುಗಳನ್ನು ಕ್ರಮವಾಗಿ ನಿಪಿ.7 ರಿಂದ ನಿಪಿ.12 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**